ಹೂವಿನದ್ದೇ ಆಗಿರಬೇಕಂತೆ. ಒಂದು ವೇಳೆ, ಬೇಕಾದಷ್ಟು ಹೂವುಗಳು ಸಿಗದಿದ್ದಲ್ಲಿ, ಹೂವಿನ ಎಸಳುಗಳನ್ನಾದರೂ ಕಟ್ಟಲೇಬೇಕು. ಕೆಂಪು ಬಣ್ಣದ ಗೋಸಂಪಿಗೆ ಹೂಗಳ ಬಳಕೆ ನಿಷಿದ್ಧ. ಉತ್ತರ ಕನ್ನಡ ಜಿಲ್ಲೆಯ ಅಂಕೋಲಾದ, ಅಗಸೂರು ಗ್ರಾಮದೇವರ ಸಂಕೀರ್ಣದಲ್ಲಿ ಕೆಂಪು ಅಥವಾ ಬಿಳಿ ಬಣ್ಣದ ಗೋಸಂಪಿಗೆ ಮರವಿರುವುದು ಕಡ್ಡಾಯವಂತೆ.

ಕರಾವಳಿ, ಮಲೆನಾಡು ಪ್ರದೇಶದ ಹಳ್ಳಿಯ ಅನೇಕ ಮನೆಗಳ ಬಾವಿಯ ಬಳಿ ಗೋಸಂಪಿಗೆ ಮರಗಳು ಸರ್ವೇಸಾಮಾನ್ಯ. ದೇವರ ದೈನಂದಿನ ಪೂಜೆಗೆ ಗೋಸಂಪಿಗೆ ಹೂವನ್ನು ಅಷ್ಟಾಗಿ ಬಳಸುವುದಿಲ್ಲ. ಆದರೂ ಸೌರಮಾನ ಯುಗಾದಿಯ ಹಿಂದಿನ ದಿನ ಇಡುವ ವಿಷುಕಣಿಯ ಜೊತೆ, ಗೋಸಂಪಿಗೆ ಹೂಗಳ ಗೊಂಚಲು ಇರಲೇಬೇಕು. ಬಾವಿಕಟ್ಟೆಯ ಬಳಿ ಗೋಸಂಪಿಗೆ ಮರ ಏಕೆ ನೆಡುತ್ತಾರೆ ಎಂಬ ಸಂದೇಹಕ್ಕೆ ಅಂತರ್ಜಾಲದಲ್ಲಿ ಸಮಂಜಸವಾದ ಉತ್ತರ ಸಿಗಲಿಲ್ಲ. ಅನುಭವಿ ಹಿರಿಯರಿಂದ ಎರಡು ರೀತಿಯ ಉತ್ತರ ಸಿಕ್ಕಿತು. ನಾಗನಡೆ (ನಾಗರಹಾವು ಸಂಚರಿಸುವ ದಾರಿ) ಇರುವಲ್ಲಿ ಗೋಸಂಪಿಗೆ ಗಿಡ/ಮರ ಇದ್ದರೆ ನಾಗರಹಾವು ತನ್ನ ದಾರಿ ಬದಲಿಸುತ್ತದೆಯಂತೆ. ಗೋಸಂಪಿಗೆ ಗಿಡ/ಮರದ ಬಳಿ ನಾಗರಹಾವು ಬರುವುದಿಲ್ಲ ಎಂಬ ಉತ್ತರ ಹಲವರಿಂದ ಸಿಕ್ಕಿತು. ಗಿಡದ ಎಲೆಗಳು ನೀರಿನ ಶುದ್ಧೀಕರಣಕ್ಕೆ ನೆರವಾಗುತ್ತವೆ ಎಂಬುದು ಕೆಲವರ ಅಂಬೋಣ.

ಬಂಗಾಳದಲ್ಲಿ ಬಿಳಿಯ ಗೋಸಂಪಿಗೆ ಹೂಗಳನ್ನು ಮೃತದೇಹದ ಮೇಲಿಡುತ್ತಾರೆ, ಅಂತ್ಯಕ್ರಿಯೆಯಲ್ಲೂ ಬಳಸುತ್ತಾರೆ.

## ಶುಭಸೂಚಕ, ಸೌಂದರ್ಯದ ಪ್ರತೀಕ

ಹವಾಯ್ ದ್ವೀಪಗಳಲ್ಲಿ ಗೋಸಂಪಿಗೆ ಹೂವು ಪ್ರತಿಷ್ಠೆಯದ್ಯೋತಕ, ಸಕಾರಾತ್ಮಕತೆಯ ಸಂಕೇತ. ಒಟ್ಟಿನಲ್ಲಿ ಶುಭಸೂಚಕವಾದ ಹೂವು. ಅಲ್ಲಿನ ರಾಷ್ಟ್ರೀಯ ಪುಷ್ಪ ದಾಸವಾಳಕ್ಕಿರುವ ಪ್ರಾಧಾನ್ಯತೆ ಗೋಸಂಪಿಗೆಗೂ ಇದೆ. ಅಲ್ಲಿಯ ಜನರಿಗೆ ಈ ಹೂವನ್ನು ಕಿವಿಯ ಮೇಲೆ ಇಟ್ಟುಕೊಳ್ಳುವುದು, ಆ ಹೂವಿನ ಮಾಲೆ ಹಾಕಿಕೊಳ್ಳುವುದು ಮತ್ತು ಹೂವಿನಂತೆ ಕಾಣುವ ಕಿವಿಯ ಆಭರಣಗಳನ್ನು ಧರಿಸುವುದು ಕೂಡಾ ಖುಷಿ ಕೊಡುವಂತಹ ಸಂಗತಿ. ಹೂವಿನ ಚಿತ್ರವುಳ್ಳ, ಗಾಢ ಬಣ್ಣದ ಅಂಗಿಯನ್ನು ಧರಿಸುವುದು ಕೂಡಾ ಇಲ್ಲಿಯ ಜನರಿಗೆ ಬಲು ಇಷ್ಟ. ಹುಟ್ಟುಹಬ್ಬದ ಆಚರಣೆ, ಮದುವೆ ಇನ್ನಿತರ ಶುಭ ಸಮಾರಂಭಗಳಲ್ಲಿ ವೇದಿಕೆಯ ಅಲಂಕಾರದಲ್ಲಿ, ಹೂ ಗುಚ್ಛಗಳಲ್ಲಿ, ಹೂದಾನಿಗಳಲ್ಲಿ ಈ ಹೂವುಗಳು ಇದ್ದೇ ಇರುತ್ತವೆ. ಹವಾಯ್ ದ್ವೀಪಗಳಲ್ಲಿ ಮಾತ್ರವಲ್ಲ, ಪೋಲಿನೇಶಿಯಾ ದೇಶದಲ್ಲಿ ಕೂಡಾ ಈ ಹೂವು ಓರ್ವ ಮಹಿಳೆಯ ವೈವಾಹಿಕ ಸ್ಥಿತಿಯನ್ನು ಸೂಚಿಸಲು ಬಳಕೆಯಾಗುತ್ತದೆ. ಈ ಹೂವನ್ನು ಬಲ ಕಿವಿಯ ಮೇಲಿಟ್ಟರೆ ಅಥವಾ ಬಲಕಿವಿಯ ಬಳಿ ಮುಡಿದಿದ್ದರೆ ಸ್ತ್ರೀ ಅವಿವಾಹಿತೆಯೆಂದೂ, ಎಡ ಕಿವಿಯ ಮೇಲಿಟ್ಟರೆ ಸ್ತ್ರೀ ವಿವಾಹಿತೆಯೆಂದೂ ಅರ್ಥ.



ಇಂಡೊನೇಷಿಯಾದ ಬಾಲಿಯಲ್ಲಂತೂ ಗೋಸಂಪಿಗೆಗೆ ಪವಿತ್ರ ಸ್ಥಾನ. ರಸ್ತೆಯ ಇಕ್ಕೆಲಗಳಲ್ಲೂ, ದೇವಾಲಯಗಳ ಪಕ್ಕದಲ್ಲೂ, ಒಳಗಡೆಯಲ್ಲೂ ಈ ಹೂವಿನ ಮರಗಳನ್ನು ಕಾಣಬಹುದು. ಪ್ರತಿ ಮನೆಯಲ್ಲಿಯೂ ಸಣ್ಣ ದೇವಾಲಯವಿರುತ್ತದೆ. ದೇವರ ಪೂಜೆಗೆ ಈ ಹೂವು ಬೇಕೇ ಬೇಕು. ಹೆಚ್ಚೇಕೆ, ಪೂಜೆ ಮಾಡುವ ಮಹಿಳೆಯೂ ಈ ಹೂವನ್ನು ಮುಡಿದಿರಲೇಬೇಕು. ಅಲ್ಲಿನ ಸ್ತ್ರೀಯರು ಬಳಸುವ ಹೇರ್‌ಕ್ಲಿಪ್, ಹೇರ್‌ಬ್ಯಾಂಡ್ ಮೊದಲಾದ ಆಲಂಕಾರಿಕ ಸಾಮಗ್ರಿಗಳಲ್ಲಿ ಗೋಸಂಪಿಗೆ ವಿನ್ಯಾಸವಿರುವುದನ್ನು ಇಷ್ಟಪಡುತ್ತಾರೆ.

ಭಾರತೀಯ ಪರಂಪರೆಯಲ್ಲಿ ಗೋಸಂಪಿಗೆ ಹೂವು ಸಮರ್ಪಣೆ ಮತ್ತು ಭಕ್ತಿಯ ಸಂಕೇತ ಹೊಂದಿದೆ. ಮಾಯನ್ನರ ಸಂಸ್ಕೃತಿಯಲ್ಲಿ ಹೂವಿನ ಅರಳುವಿಕೆ ಹುಟ್ಟು–ಸಾವುಗಳನ್ನು ಪ್ರತಿನಿಧಿಸುತ್ತದೆ. ಮೆಕ್ಸಿಕನ್ ಸಂಸ್ಕೃತಿಯಲ್ಲಿ ಇದು ದೇವರುಗಳಿಗೆ ಜನ್ಮ ನೀಡಿದ ಹೂವು ಎಂಬ ನಂಬಿಕೆ ಇದೆ. ಕೆಂಪು ಬಣ್ಣದ ಗೋಸಂಪಿಗೆ ಹೂವು ನಿಕರಾಗುವ ದೇಶದ ರಾಷ್ಟ್ರೀಯ ಪುಷ್ಪವಾಗಿದೆ. ಬಿಳಿ ಬಣ್ಣದ ಗೋಸಂಪಿಗೆ ಲಾವೋಸ್ ದೇಶದ ರಾಷ್ಟ್ರೀಯ ಪುಷ್ಪವಾಗಿದೆ.

ಫೆಂಗ್‌ಶುಯಿ ಪ್ರಕಾರ ಗೋಸಂಪಿಗೆ ಹೂವು ಪ್ರೀತಿಗೆ ಸಂಬಂಧಿಸಿದೆ. ಚೀನಾದಲ್ಲಿ ಈ ಹೂವು ಬಹಳ ಅಪರೂಪ. ಆದ್ದರಿಂದ, ಹೂವನ್ನು ಅತ್ಯಂತ ಪ್ರೀತಿಪಾತ್ರರಿಗೆ ವಿಶೇಷ ಉಡುಗೊರೆಯಾಗಿ ಕೊಡುವ ಕ್ರಮ ಅಲ್ಲಿದೆ. ಬೇರುಸಹಿತ ಮಣ್ಣಿನಿಂದ ಬೇರ್ಪಡಿಸಿದ ಗಿಡದಲ್ಲಿ ಮಾತ್ರವಲ್ಲ ಮುರಿದು ಬಿದ್ದ ಗೆಲ್ಲಿನಲ್ಲೂ ಕೂಡಾ ಹೊಸ ಹೂವು ಅರಳುವುದರಿಂದ, ಅಮರತ್ವದ ಮರ ಎನ್ನುತ್ತಾರೆ ಬೌದ್ಧ ಧರ್ಮೀಯರು. ಲಾವೋಸ್ ದೇಶದ ಪ್ರತಿಯೊಂದು ಬೌದ್ಧ ದೇವಾಲಯಗಳ ಎದುರಲ್ಲೂ ಈ ಹೂವಿನ ಮರಗಳಿರುತ್ತವೆ. ಫಿಲಿಪ್ಪೀನ್ಸ್ ದೇಶದಲ್ಲಿ ಪ್ರೇತಗಳಿಗೆ ಆಶ್ರಯ ಕೊಡುವ ಮರ ಎಂಬ ಪ್ರತೀತಿ ಇದೆ. ಫಿಲಿಪ್ಪೀನ್ಸ್, ಇಂಡೊನೇಷಿಯಾ, ಮಲೇಶಿಯಾ ದೇಶಗಳಲ್ಲಿ ಈ ಹೂವಿನ ಗಿಡಗಳನ್ನು ಸಮಾಧಿ ಸ್ಥಳಗಳಲ್ಲಿ ನೆಡುತ್ತಾರೆ. ಕೆರಿಬಿಯನ್ ದ್ವೀಪಗಳಲ್ಲಿ ಸ್ಮಶಾನದ ಮರ ಎಂಬ ನಂಬಿಕೆ ಇದೆ.

## ಔಷಧೀಯ ಗುಣಗಳ ಭಂಡಾರ

ವಿವಿಧ ಪ್ರಭೇದಗಳ ಗೋಸಂಪಿಗೆ ಗಿಡ/ಮರದ ಪ್ರತಿಯೊಂದು ಭಾಗವನ್ನೂ (ಬೇರಿನ ತೊಗಟೆ, ತೊಗಟೆ, ಎಲೆಗಳು, ಹೂವುಗಳು ಮತ್ತು ಗಿಡದಿಂದ ಬರುವ ಹಾಲಿನಂತಹ ದ್ರವ) ಮನೆಮದ್ದಾಗಿ ಉಪಯೋಗಿಸುವ ಬಗ್ಗೆ ಮಾಹಿತಿಗಳು ಲಭ್ಯವಿವೆ. ಸಾಮಾನ್ಯ ಕಾಯಿಲೆಗಳಾದ ಜ್ವರ, ಕೆಮ್ಮು, ಮಲಬದ್ಧತೆ, ಅತಿಸಾರ, ಭೇದಿ, ಹಲ್ಲುನೋವು ಅಲ್ಲದೆ ಅಸ್ತಮಾ, ಮಧುಮೇಹ ಹಲವು ರೀತಿಯ ಚರ್ಮರೋಗಗಳ ಚಿಕಿತ್ಸೆಗಳಲ್ಲಿ ಗೋಸಂಪಿಗೆ ಉಪಯುಕ್ತವೆನಿಸಿಕೊಂಡಿದೆ. ಆಯುರ್ವೇದದಲ್ಲಿ ಗೋಸಂಪಿಗೆ ಹೂವಿನ ಎಣ್ಣೆಯನ್ನು ಭಯ, ಆತಂಕ, ನಿದ್ರಾಹೀನತೆ, ನಡುಕ ಇವುಗಳನ್ನು ದೂರ ಮಾಡಲು ಬಳಸುವ ಬಗ್ಗೆ ಉಲ್ಲೇಖವಿದೆ.

ಸ್ನಿಗ್ಧ ಚೆಲುವು, ಪರಿಮಳ ಶತಮಾನಗಳಿಂದ ಅಸ್ಮಿತೆಯನ್ನು ಉಳಿಸಿಕೊಂಡಿರುವ ಗೋಸಂಪಿಗೆ ಹೂವು ಜಗತ್ತಿನೆಲ್ಲೆಡೆಯ ದೇಶಗಳ ಸಂಸ್ಕೃತಿಯಲ್ಲಿ ಬೆರೆತು ಹೋಗಿದೆ.